**2 ನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ ಪಾಂಡವಪುರ**

**ದಿನಾಂಕ 27.01.2025 ರಂದು ಪ್ರಮಾಣ ವಚನ ಬೋಧಿಸಲಾಯಿತು**

ಡಿಡಬ್ಲ್ಯು -1

| | |
|---|---|
| ಹೆಸರುಃ | ರವಿಕುಮಾರ |
| ತಂದೆಯ ಹೆಸರುಃ | ಮಹದೇವು |
| ವಯಸ್ಸುಃ | 38 ವರ್ಷ |
| ಉದ್ಯೋಗಃ | ಸುಪರವೈಸರ್, ಉದಯಗಿರಿ ರಸ್ತೆ ಕಾಮಗಾರಿ |
| ವಾಸಃ | ಮನೆ ನಂಬರ 90, 4 ನೇ ಅಡ್ಡರಸ್ತೆ,<br>2 ನೇ ಮುಖ್ಯ ರಸ್ತೆ, ಬಿ ಎಂ ಶ್ರೀನಗರ,<br>ಮೇಟಗಳ್ಳಿ, ಮೈಸೂರು |

**ಮುಖ್ಯ ವಿಚಾರಣೆ ಆರೋಪಿ ಪರ ವಕೀಲರಾದಃ ಶ್ರೀ ಬಿ ಬಿ ರವರಿಂದಃ**

ನಾನು ಪಿರ್ಯಾದುದಾರರ ಬಳಿ ಚೀಟಿ ಹಾಕಿದ್ದು, ಸದರಿ ಚೀಟಿ ಭದ್ರತೆಗಾಗಿ ನಾನು ಸಹಿ ಮಾಡಿರುವ 2 ಖಾಲಿ ಚೆಕ್ಕುಗಳನ್ನು ನನ್ನಿಂದ ಪಡೆದಿರುತ್ತಾರೆ. ಚೀಟಿ ಮುಗಿದಿದ್ದು, ನಾನು ಚೀಟಿ ಹಣವನ್ನು ಕಟ್ಟಿದ್ದರೂ ಸಹಾ ನನಗೆ ನಾನು ಭದ್ರತೆಗಾಗಿ ಕೊಟ್ಟಿರುವ ಸಹಿ ಮಾಡಿರುವ 2 ಖಾಲಿ ಚೆಕ್ಕುಗಳನ್ನು ಪಿರ್ಯಾದುದಾರರು ನನಗೆ ವಾಪಸು ಕೊಟ್ಟಿರುವುದಿಲ್ಲ. ನಾನು ಪಿರ್ಯಾದುದಾರರ ಮನೆ ಬಳಿ ಹೋಗಿ 2-3 ಬಾರಿ ಖಾಲಿ ಚೆಕ್ಕುಗಳನ್ನು ವಾಪಸು ಕೇಳಿದ್ದರೂ ಸಹಾ ಪಿರ್ಯಾದುದಾರರು ಈಗ ಕೊಡುತ್ತೇನೆ, ಅಗ ಕೊಡುತ್ತೇನೆ ಎಂದು ಚೆಕ್ಕನ್ನು ವಾಪಸು ನನಗೆ ಕೊಟ್ಟಿರುವುದಿಲ್ಲ, ಒಂದು ದಿನ ನಾನು ಖಾಲಿ ಚೆಕ್ಕುಗಳನ್ನು ವಾಪಸು ಕೊಡಲೇಬೇಕು ಎಂದು ಪಟ್ಟು ಹಿಡಿದು ಪಿರ್ಯಾದುದಾರರ ಮನೆ ಬಳಿ ಕೂತು ಬಿಟ್ಟೆ, ಆಗ ಅವರ ಮನೆಯ ಅಕ್ಕಪಕ್ಕದವರು ಬಂದು 6 ತಿಂಗಳ ಒಳಗಾಗಿ ಚೆಕ್ಕುಗಳನ್ನು ವಾಪಸು ಕೊಡುವುದಾಗಿ ತೀರ್ಮಾನ ಮಾಡಿ ನನ್ನನ್ನು ವಾಪಸು ಕಳುಹಿಸಿರುತ್ತಾರೆ.

2. ನನಗೆ ಈ ಪ್ರಕರಣ ದಾಖಲಾಗಿರುವ ಬಗ್ಗೆ ಗೊತ್ತಿಲ್ಲ, ಪಿರ್ಯಾದುದಾರರು ಕಳುಹಿಸಿರುವ ನೋಟಿಸಿನ ವಿಳಾಸದಲ್ಲಿ ನಾನು ವಾಸವಾಗಿರುವುದಿಲ್ಲ, ನನಗೆ ಸಮನ್ಸ್ ಆಗಲಿ ನೋಟಿಸಾಗಲಿ ಬಂದಿರುವುದಿಲ್ಲ, ಪೋಲಿಸರು ಪೋನ್ ಮಾಡಿದ ನಂತರ ಪಿರ್ಯಾದುದಾರರು ಈ ಪ್ರಕರಣ ದಾಖಲಿಸಿರುವ ಬಗ್ಗೆ ನನಗೆ ಗೊತ್ತಾಯಿತು.

ಚೀಟಿ ದುಡ್ಡನ್ನು ನಾನು ಆನ್‌ಲೈನ್ ನಲ್ಲಿ ಸ್ವಲ್ಪ ಪಿರ್ಯಾದುದಾರರಿಗೆ ಕೊಟ್ಟಿರುತ್ತೇನೆ ಹಾಗೂ ನೇರವಾಗಿ ಪಿರ್ಯಾದುದಾರರ ಮನೆಗೆ ಹೋಗಿ ಸ್ವಲ್ಪ ದುಡ್ಡನ್ನು ಕೊಟ್ಟಿರುತ್ತೇನೆ. ನನ್ನ ತಮ್ಮನಾದ ಚಂದ್ರುರವರ ಸಮಕ್ಷಮದಲ್ಲೇ ನಾನು ಚೀಟಿಯ ಹಣವನ್ನು ಪಿರ್ಯಾದುದಾರರಿಗೆ ಕೊಟ್ಟಿರುತ್ತೇನೆ, ಅವರನ್ನು ಸಹಾ ವಿಚಾರಣೆಗೆ ಒಳಪಡಿಸುತ್ತೇನೆ. ಈ ಪ್ರಕರಣದಲ್ಲಿ ಪಿರ್ಯಾದುದಾರರು ಹೇಳಿರುವಂತೆ ಪಿರ್ಯಾದುದಾರರಿಂದ ಯಾವುದೇ ಸಾಲವನ್ನು ಪಡೆದಿರುವುದಿಲ್ಲ, ಚೆಕ್ಕನ್ನು ಕೊಟ್ಟಿರುವುದಿಲ್ಲ. ಪಿರ್ಯಾದುದಾರರು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ, ಆದ್ದರಿಂದ ನನಗೆ ನ್ಯಾಯ ದೊರಕಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಆರೋಪಿ ಪರ ಮುಂದುವರಿದು ಮುಖ್ಯ ವಿಚಾರಣೆಗೆ ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಗಿದೆ.

(ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

**ಸಾ.ಓ.ಹೇ.ಸ.ಇದೆ.**

2 ನೇ ಅಪರ ಸಿವಿಲ್ ಜೆಡ್ಜ್ ಮತ್ತು
ಜೆ ಎಂ ಎಫ್ ಸಿ, ಪಾಂಡವಪುರ.